**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಡಾ|| ತಳವಾರ್ ಸಾಬಣ್ಣ ರವರ 330ನೇ ನಿಯಮದ ಸೂಚನೆಗೆ ನಗರಾಭಿವೃದ್ಧಿ ಸಚಿವರ ಉತ್ತರ.**

**ಪ್ರಶ್ನೆ:**

ಕರ್ನಾಟಕದಲ್ಲಿ ಮಹಾನಗರಪಾಲಿಕೆಗಳಲ್ಲಿ ಕಡ್ಡಾಯವಾಗಿ ರಚಿಸಬೇಕಾದ ವಾರ್ಡ್ ಸಮಿತಿಗಳನ್ನು ರಚಿಸದೆಯಿರುವುದು ಮತ್ತು ಏರಿಯಾ ಸಭೆಗಳನ್ನು ಸರ್ಕಾರ ನಡಸದೆಯಿರುವ ಕುರಿತು ಮಾನ್ಯ ಸಚಿವರಲ್ಲಿ ಮಾಹಿತಿಯನ್ನು ಬಯಸಿರುತ್ತಾರೆ.

**ಉತ್ತರ:**

ರಾಜ್ಯದ ಮಹಾನಗರಪಾಲಿಕೆಗಳಲ್ಲಿ ವಾರ್ಡ್ ಸಮಿತಿ ರಚನೆ ಮಾಡುವ ಕುರಿತು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಅಧಿನಿಯಮ 1976ರ ಅಧ್ಯಾಯ-3ಎ ರನ್ವಯ ಕಲಂ:13ಹೆಚ್ ರಂತೆ ಚುನಾಯಿತ ಪ್ರತಿನಿಧಿಗಳು ಇರುವ ರಾಜ್ಯದ ಎಲ್ಲಾ ಮಹಾನಗರಪಾಲಿಕೆಗಳು ನಿಯಮಾನುಸಾರ ವಾರ್ಡ್ ಸಮಿತಿಗಳನ್ನು ರಚಿಸಬೇಕಾಗಿರುತ್ತದೆ.

ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಅಧಿನಿಯಮ 1976ರಡಿ ರಚಿಸುವ ವಾರ್ಡ್ ಸಮಿತಿಗಳ ಜವಾಬ್ದಾರಿ ಮತ್ತು ಕಾರ್ಯವೈಖರಿಗಳ ಬಗ್ಗೆ ಅಧಿನಿಯಮ 13-ಕೆ ರನ್ವಯ ನಗರಾಭಿವೃದ್ಧಿ ಇಲಾಖೆ ವತಿಯಿಂದ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ (ವಾರ್ಡ್ ಸಮಿತಿ) ನಿಯಮಗಳು-2015ನ್ನು ಕರ್ನಾಟಕ ರಾಜ್ಯ ಪತ್ರದ ಅಧಿಸೂಚನೆ ದಿನಾಂಕ: UDD 507 MNY 2012, ಬೆಂಗಳೂರು, ದಿನಾಂಕ:22.06.2016 ರಂದು ಪ್ರಕಟಿಸಲಾಗಿರುತ್ತದೆ.

ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ (ವಾರ್ಡ್ ಸಮಿತಿ) ನಿಯಮಗಳು 2015ರಂತೆ ಬೃಹತ್ ಬೆಂಗಳೂರು ಮಹಾನಗರಪಾಲಿಕೆಯವರು ರಚಿಸಿರುವ ಮಾದರಿಯಲ್ಲಿ ಮಹಾನಗರಪಾಲಿಕೆಯ ಎಲ್ಲ ವಾರ್ಡ್‌ಗಳಲ್ಲಿ ವಾರ್ಡ್ ಸಮಿತಿಯನ್ನು ರಚಿಸಲು ಹಾಗೂ ತೆಗೆದುಕೊಂಡಿರುವ ಕ್ರಮಗಳ ಇತ್ತೀಚಿನ ಮಾಹಿತಿಯನ್ನು ನೇರವಾಗಿ ಸರ್ಕಾರಕ್ಕೆ ಸಲ್ಲಿಸುವಂತೆ ಹಾಗೂ ಪ್ರತಿಯನ್ನು ನಿರ್ದೇಶನಾಲಯಕ್ಕೆ ಸಲ್ಲಿಸುವಂತೆ ಕೋರಿ ನಿರ್ದೇಶನಾಲಯದಿಂದ ದಿನಾಂಕ:21.08.2023ರಂದು ಪತ್ರ ಬರೆಯಲಾಗಿರುತ್ತದೆ.

ಅದರನ್ವಯ 10 ಮಹಾನಗರಪಾಲಿಕೆಗಳ ಮಾಹಿತಿಯು ಈ ಕೆಳಕಂಡಂತ್ತಿದೆ:-

- ತುಮಕೂರು ಮಹಾನಗರಪಾಲಿಕೆಯಲ್ಲಿ 35 ವಾರ್ಡ ಸಮಿತಿಗಳನ್ನು ರಚಿಸಲಾಗಿರುತ್ತದೆ.
- ಶಿವಮೊಗ್ಗ ಮಹಾನಗರಪಾಲಿಕೆಯಲ್ಲಿ 35 ವಾರ್ಡ ಸಮಿತಿಯನ್ನು ರಚಿಸಲಾಗಿರುತ್ತದೆ.
- ಮಂಗಳೂರು ಮಹಾನಗರಪಾಲಿಕೆಯಲ್ಲಿ 60 ವಾರ್ಡ್ ಸಮಿತಿಯನ್ನು ರಚಿಸಲಾಗಿರುತ್ತದೆ. ಮುಂದುವರೆದು, ಪಾಲಿಕೆಯಲ್ಲಿ 60 ವಾರ್ಡ್‌ಗಳಿಗೆ ಏರಿಯಾ ಸಭಾಗಳಿಗೆ ಪ್ರತಿನಿಧಿಗಳನ್ನು ನಾಮನಿರ್ದೇಶಿಸಿ ಕಾರ್ಯಗತಗೊಳಿಸುವ ಬಗ್ಗೆ ಪರಿಷತ್ತಿಗೆ ಕಾರ್ಯಸೂಚಿ ಮಂಡಿಸಲಾಗಿದ್ದು, ಪರಿಷತ್ತಿನ ಠರಾವು ಸಂಖ್ಯೆ:48/2023 ರ ಠರಾವಿನಂತೆ ಏರಿಯಾ ಸಭಾ ಉಪನಿಯಮ ರಚನೆಯಾಗುವವರೆಗೆ ಸದರಿ ಕಾರ್ಯಸೂಚಿಯನ್ನು ಮುಂದೂಡಲು ನಿರ್ಣಯಿಸಲಾಗಿರುತ್ತದೆ ಹಾಗೂ ಪರಿಷತ್ತಿನ ಠರಾವು ಸಂಖ್ಯೆ:49/2023 ರಂತೆ ವಾರ್ಡ್ ಸಮಿತಿ ಮತ್ತು ಏರಿಯಾ ಸಭಾಗಳ ಸುಲಲಿತ ಕಾರ್ಯನಿರ್ವಹಣೆಗಾಗಿ ಕಲಂ 13ಜೆ ಪ್ರಕಾರ ಉಪನಿಯಮಗಳನ್ನು ರಚಿಸುವ ಬಗ್ಗೆ, ಮಾನ್ಯ ಮಹಾಪೌರರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಈಗಾಗಲೇ ರಚಿಸಿದ್ದು, ಅದರಂತೆ ಪಾಲಿಕೆಯಲ್ಲಿ ಬೈಲಾ ರಚಿಸಿದ ನಂತರ ಪರಿಷತ್ತಿನ ಅಂಗೀಕಾರ ಪಡೆದು ಏರಿಯಾ ಸಭಾ ರಚಿಸಲು ಕ್ರಮವಹಿಸಲಾಗುತ್ತಿದೆ.

....2

- ದಾವಣಗೆರೆ ಮಹಾನಗರಪಾಲಿಕೆಯಲ್ಲಿ 45 ವಾರ್ಡುಗಳಿದ್ದು, ಈ ಪೈಕಿ 22 ವಾರ್ಡ್‌ಗಳಲ್ಲಿ ವಾರ್ಡ್ ಸಮಿತಿ ರಚನೆಯಾಗಿದ್ದು, ಉಳಿದ 23 ವಾರ್ಡ್‌ಗಳಲ್ಲಿ ವಾರ್ಡ್ ಸಮಿತಿ ರಚಿಸುವ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

- ಮೈಸೂರು ಮಹಾನಗರಪಾಲಿಕೆಯ ವಾರ್ಡು ಸಮಿತಿಗೆ 10 ಸದಸ್ಯರನ್ನು ಯಾವ ಮಾನದಂಡದ ಮೇಲೆ ನೇಮಿಸಬೇಕೆಂಬ ಬಗ್ಗೆ ಸ್ಪಷ್ಟೀಕರಣ ಕೋರಿರುತ್ತಾರೆ.

- ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆಯಲ್ಲಿ ವಾರ್ಡ್ ಸಮಿತಿ ರಚಿಸುವ ಕುರಿತು ಸಭೆಯ ಕಾರ್ಯಕಲಾಪಗಳು ದಿನಾಂಕ:26.05.2023, ಠರಾವು ಸಂಖ್ಯೆ: 287ನ್ನು ಅನುಷ್ಠಾನಗೊಳಿಸಲು ಸೂಕ್ತ ನಿರ್ದೇಶನ ನೀಡಲು ಕೋರಿರುತ್ತಾರೆ.

- ವಿಜಯಪುರ ಮಹಾನಗರಪಾಲಿಕೆಯಲ್ಲಿ ವಾರ್ಡ್ ಸಮಿತಿ ರಚನೆಗೆ ಪಾಲಿಕೆಯ ಚುನಾಯಿತ ಸದಸ್ಯರು ಸದಸ್ಯತ್ವ ವಹಿಸಿಕೊಂಡ ನಂತರ ವಾರ್ಡ್ ಸಮಿತಿ ರಚನೆ ಮಾಡಲಾಗುವುದು.

- ಕಲಬುರಗಿ ಮಹಾನಗರಪಾಲಿಕೆಯಲ್ಲಿ ದಿನಾಂಕ:23.03.2023ರಂದು ಹೊಸ ಕೌನ್ಸಿಲ್ ಅಸ್ತಿತ್ವಕ್ಕೆ ಬಂದಿದ್ದು, ವಾರ್ಡ್ ಸಮಿತಿ ರಚನೆ ಮಾಡುವ ಬಗ್ಗೆ ಕರೆಯಲಾದ ಅರ್ಜಿಗಳನ್ನು ಪರಿಗಣಿಸುವ ದೃಷ್ಟಿಯಿಂದ ಮತ್ತು ಪಾಲಿಕೆಯ ಸಾಮಾನ್ಯ ಸಭೆಯಲ್ಲಿ ಕೈಕೊಳ್ಳುವ ನಿರ್ಣಯದ ಪ್ರಕಾರ ವಾರ್ಡ್ ಸಮಿತಿ ರಚಿಸಲಾಗುವುದು ಎಂದು ವರದಿ ಸಲ್ಲಿಸಿರುತ್ತಾರೆ.

- ಬೆಳಗಾವಿ ಮಹಾನಗರಪಾಲಿಕೆಯಲ್ಲಿ ವಾರ್ಡ್ ಸಮಿತಿ ರಚಿಸುವ ಕುರಿತು ಆಸಕ್ತ ಸಾರ್ವಜನಿಕರಿಂದ ಅರ್ಜಿಗಳು ಸ್ವೀಕೃತವಾಗಿದ್ದು, ಸದರಿ ಅರ್ಜಿಗಳನ್ನು ಪರಿಶೀಲಿಸಿ, ವಾರ್ಡ್ ಕಮಿಟಿ ರಚಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿರುತ್ತಾರೆ.

- ಬಳ್ಳಾರಿ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಗಳನ್ನು ರಚಿಸುವ ಕುರಿತು ಈಗಾಗಲೇ ಸಾರ್ವಜನಿಕ ಪತ್ರಿಕಾ ಪ್ರಕಟಣೆ ಹೊರಡಿಸಲಾಗಿದ್ದು, ಒಟ್ಟು 39 ವಾರ್ಡ್‌ಗಳ ಪೈಕಿ ಕೇವಲ 9 ವಾರ್ಡ್‌ಗಳಲ್ಲಿ ಮಾತ್ರ ಅರ್ಜಿಗಳು ಸ್ವೀಕೃತವಾಗಿರುತ್ತವೆ. ಸ್ವೀಕೃತಗೊಂಡ ಅರ್ಜಿಗಳಲ್ಲಿ ಅರ್ಜಿದಾರರ ಮಾಹಿತಿಯು ಅಪೂರ್ಣವಾಗಿರುತ್ತವೆ. ಸದರಿ ಮಾಹಿತಿಯನ್ನು ಪಾಲಿಕೆಯ ಸಾಮಾನ್ಯ ಸಭೆಯಲ್ಲಿ ಮಂಡಿಸಿದಾಗ ಮತ್ತೊಮ್ಮೆ ಸಾರ್ವಜನಿಕ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲು ತೀರ್ಮಾನಿಸಲಾಗಿದ್ದು, ಸಾರ್ವಜನಿಕ ಪತ್ರಿಕಾ ಪ್ರಕಟಣೆ ಹೊರಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

**ನಅಇ 240 ಎಂಎನ್‌ಇ 2023(ಇ)**

11/12/2023

**(ಬಿ.ಎಸ್.ಸುರೇಶ)**
ನಗರಾಭಿವೃದ್ಧಿ ಹಾಗೂ ನಗರ
ಯೋಜನೆ ಸಚಿವರು